**ಪ್ರಮಾಣ ವಚನ ಬೋಧಿಸಿದ ದಿನಾಂಕಃ 19.09.2025**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರಿ ಸರ್ಕಾರಿ ಅಭಿಯೋಜಕರಿಂದಃ**

5. ದಿನಾಂಕ 22.11.2017 ರಂದು ಕೃತ್ಯ ನಡೆದ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರ ಸಮಕ್ಷಮ, ಅವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ 1 ನೇ ಆರೋಪಿ ಸ್ಥಳದಿಂದ ಹಾಜರುಪಡಿಸಿದ ಪ್ಲಾ ಸ್ಟಿಕ್ ಹಿಡಿಯಿರುವ ಒಂದು ಚಾಕುವನ್ನು ಮೊದಲಿಗೆ ವಶಪಡಿಸಿಕೊಂಡಿದ್ದು, ನಂತರ 2 ನೇ ಆರೋಪಿ ಅಲ್ಲೇ ಸ್ವಲ್ಪ ಹತ್ತಿರದಲ್ಲಿ ಸ್ಥಳದಿಂದ ಹಾಜರುಪಡಿಸಿದ ಕಂದು ಬಣ್ಣದ ಪ್ಲಾ ಸ್ಟಿಕ್ ಹಿಡಿಯಿರುವ ಒಂದು ಚಾಕುವನ್ನು ಹಾಜರುಪಡಿಸಿದ್ದು ಅದನ್ನು ನಂತರ ವಶಪಡಿಸಿಕೊಂಡಿದ್ದು, ಎರಡು ಚಾಕುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಸೀಲ್ ಸಹಿ ಮಾಡಿ ವಶಪಡಿಸಿಕೊಳ್ಳಲಾಗಿರುತ್ತದೆ. ನಂತರ 1 ಮತ್ತು 2 ನೇ ಆರೋಪಿತರು ಸ್ಥಳದಲ್ಲಿ ಕೃತ್ಯ ಎಸಗುವಾಗ ಬಿಟ್ಟಿದ್ದ ಎರಡು ದ್ವಿಚಕ್ರ ವಾಹನಗಳಾದ ಕೆಎ-03-ಎಹೆಚ್-4657 ಬಾಕ್ಸರ್ ವಾಹನ ಹಾಗೂ ಕೆಎ-53-ಎಕ್ಸ್-3340 ಹೀರೋ ಹೊಂಡಾ ವಾಹನಗಳನ್ನು ಅಮಾನತುಪಡಿಸಿಕೊಳ್ಳಲಾಯಿತು. ಈ ನಾಲ್ಕು ವಸ್ತುಗಳಿಗೆ ಸಂಬಂಧಿಸಿದಂತೆ ಮಾಲುಪಟ್ಟಿ ಸಂಖ್ಯೆ 130/2017 ರಂತೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಈ ಸಂಬಂಧ ಮಾಡಲ್ಪಟ್ಟ ಸ್ಥಳ ಹಾಗೂ ಅಮಾನತು ಮಹಜರ್ ನಿಶಾನೆ ಪಿ-20 ನ್ನು ಸಾಕ್ಷಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-20(ಸಿ) ಎಂದು ಗುರುತಿಸಲಾಯಿತು.

6. ಅದೇ ದಿನ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಗಾಯಾಳುವಿನ ಗಾಯದ ಪ್ರಮಾಣ ಪತ್ರ ನೀಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ಸಾಕ್ಷಿ ಮನವಿ ಪತ್ರವನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-37 ಎಂದು ಸಾಕ್ಷಿ ಸಹಿಯನ್ನು ನಿಶಾನೆ ಪಿ-37(ಎ) ಎಂದು ಗುರುತಿಸಲಾಯಿತು. ಅದೇ ದಿನ ಎಇಇ ರವರಿಗೆ ಕೃತ್ಯ ಸ್ಥಳದ ನಕಾಶೆಯನ್ನು ರಚಿಸಿಕೊಡುವಂತೆ ಮನವಿ ನೀಡಿರುತ್ತೇನೆ. ಸಾಕ್ಷಿ ಮನವಿ ಪತ್ರವನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-38 ಎಂದು ಸಾಕ್ಷಿ ಸಹಿಯನ್ನು ನಿಶಾನೆ ಪಿ-38(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕೃತ್ಯ ಸ್ಥಳದ ನಕ್ಷೆಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-39 ಎಂದು ಸಾಕ್ಷಿ ಸಹಿಯನ್ನು ನಿಶಾನೆ ಪಿ-39(ಎ) ಎಂದು ಗುರುತಿಸಲಾಯಿತು.

7. ದಿನಾಂಕ 23.11.2017 ರಂದು 1 ನೇ ಆರೋಪಿ ನಾರಾಯಣಪ್ಪ ತಾನು ಡಾಬಾದಲ್ಲಿ ಇಟ್ಟಿದ್ದ ವಸ್ತುಗಳನ್ನು ದೇವಿಶೆಟ್ಟಿ ಹಳ್ಳಿಯಲ್ಲಿದ್ದ ತನ್ನ ಮನೆಗೆ ಸಾಗಿಸಿದ್ದು, ಸದರಿ ವಸ್ತುಗಳನ್ನು ತೋರಿಸುವುದಾಗಿ ಹೇಳಿದ್ದು ಆತನ ಮನೆಯಲ್ಲಿ ಮಧ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ಪಂಚರಾದ ಚಾಸಾ-25 ರಿಂದ 27 ರವರ ಸಮಕ್ಷಮ ಅಮಾನತು ಮಹಜರ್ ಜರುಗಿಸಿ ಮಾಲುಪಟ್ಟಿ ಸಂಖ್ಯೆ 131/2017 ರಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ 1 ರಿಂದ 5 ಸ್ವತ್ತುಗಳನ್ನು ವಶಪಡಿಸಿಕೊಂಡು, ಈ ಮೇಲ್ಕಾಣಿಸಿದ ಮಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಸಾಕ್ಷಿ ನಿಶಾನೆ ಪಿ-19 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-19(ಡಿ) ಎಂದು ಗುರುತಿಸಲಾಯಿತು.

8. ದಿನಾಂಕ 24.11.2017 ರಂದು ಸದರಿ ಅಮಾನತುಪಡಿಸಿಕೊಂಡ ವಸ್ತುಗಳನ್ನು ಡಾಬಾದಿಂದ 1 ನೇ ಆರೋಪಿ ಮನೆಗೆ ಸಾಗಾಟ ಮಾಡಲು ಬಳಸಿಕೊಂಡ ಟಾಟಾ ಎಸಿಇ ವಾಹನ ಸಂಖ್ಯೆ ಕೆಎ-43-2354 ನ ವಾಹನದ ಮಾಲೀಕರ ಮನೆಯಿದ್ದ ಹಾರಾಡಿ ಗ್ರಾಮ, ಶಿಡ್ಲಘಟ್ಟ ಗ್ರಾಮಕ್ಕೆ ತೆರಳಿ, ಪಂಚರಾದ ಚಾಸಾ-11 ರಿಂದ 13 ರವರ ಸಮಕ್ಷಮ ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ಜರುಗಿಸಿ ಮೇಲ್ಕಂಡ ವಾಹನ ಸಂಖ್ಯೆಯನ್ನು ಅಮಾನತುಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 132/2017 ನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಸಾಕ್ಷಿ ನಿಶಾನೆ ಪಿ-13 ರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-13(ಡಿ) ಎಂದು ಗುರುತಿಸಲಾಯಿತು. ಅದೇ ದಿನ ವಾಹನ ಮಾಲೀಕ ನಾಗೇಂದ್ರರವರ ಹೇಳಿಕೆಯನ್ನು ಪಡೆದು, ವಾಹನಗಳ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ದಾಖಲೆಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಶಾನೆ ಪಿ-40 ಎಂದು ಗುರುತಿಸಲಾಯಿತು.

9. ದಿನಾಂಕ 26.11.2017 ರಂದು ಸಾಕ್ಷಿದಾರರಾದ ನಾಗೇಶ್ ರವರ ಹೇಳಿಕೆಯನ್ನು, ದಿನಾಂಕ 28.11.2017 ರಂದು ಸಾಕ್ಷಿದಾರರಾ ಚಾಸಾ-34, 35 ಮತ್ತು ಚಾಸಾ-6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 30.11.2017 ರಂದು ಕವಿತಾ ಮತ್ತು ರಮೇಶ್ ರವರಿಗೆ ಸಂಬಂಧಿಸಿದ

ಗಾಯದ ಪ್ರಮಾಣ ಪತ್ರಗಳನ್ನು ಪಡೆಯಲಾಗಿರುತ್ತದೆ. ದಿನಾಂಕ 30.11.2017 ರಂದು ಕವಿತಾ ರವರ ಮರಣೋತ್ತರ ವರದಿಯನ್ನು ಪಡೆಯಲಾಗಿರುತ್ತದೆ. ಸಾಕ್ಷಿ ನಿಶಾನೆ ಪಿ-21 ರಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ-21(ಬಿ) ಎಂದು ಗುರುತಿಸಲಾಯಿತು.

10. ದಿನಾಂಕ 10.12.2017 ರಂದು ವೈದ್ಯರಿಗೆ ಮಾರಕಾಸ್ತ್ರಗಳಾದ ಚಾಕುಗಳಿಂದ ಕವಿತಾ ರವರ ದೇಹದ ಮೇಲೆ ಉಂಟಾಗಿರುವ ಗಾಯಗಳು ಆಗಬಹುದೆ ಇಲ್ಲವೇ ಎಂಬ ಬಗ್ಗೆ ಅಭಿಪ್ರಾಯ ಕೋರಿ ಮನವಿ ಮಾಡಿರುತ್ತೇನೆ. ಸದರಿ ಮನವಿಯನ್ನು ನಿಶಾನೆ ಪಿ-41 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-41(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.